**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂಃ31/2019</u> ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **01.12.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

<u>**ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ. **ಎಸ್.ಜೆ** ವಕೀಲರಿಂದಃ</u>

ನಾನು ಈ ದಾವೆಯಲ್ಲಿ ವಾದಿಯ ಮುಖ್ತೋರನಾಮೆಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು, ಪ್ರಮಾಣ ಪತ್ರವನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿದೆ. ಅದಕ್ಕೆ ನಾನು ರುಜು ಮಾಡಿರುತ್ತೇನೆ.

ನಾನು ವಾದಿಯ ನೀಡಿರುವ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ದಿ.12.04.1968 ರ ಕ್ರಯ ಪತ್ರದ ದೃಡೀಕೃತ ನಕಲನ್ನು ನಿಪಿ-2 ಎಂದು, ಮುಟೇಷನ ಆದೇಶದ ದೃಡೀಕೃತ ನಕಲನ್ನು ನಿಪಿ-3 ಎಂದು, ಇನ್ನೊಂದು ಮುಟೇಷನ ಆದೇಶವನ್ನು ನಿಪಿ-4 ಎಂದು, ಸರ್ವೇ ಸ್ಕೇಚನನ್ನು ನಿಪಿ-5 ಎಂದು, ಒಂದು ಪಹಣಿ ಪತ್ರಿಕೆಯನ್ನು ನಿಪಿ-6 ಎಂದು, ಒಂದು ಆಸ್ತಿ ತೆರಿಗೆ ಪಾವತಿ ರಸೀದಿಯನ್ನು ನಿಪಿ-7 ಎಂದು, ತಿ.ನರಸೀಪುರ ಪೊಲೀಸ ಠಾಣೆಯವರು ನೀಡಿರುವ ಸ್ವೀಕೃತಿ ರಸೀದಿಯನ್ನು ನಿಪಿ-8 ಎಂದು, ಎರಡು ಪೋಟೋಗಳನ್ನು ನಿಪಿ-9 ಮತ್ತು 10 ಎಂದು, ಒಂದು ಸಿ.ಡಿಯನ್ನು ನಿಪಿ-11 ಎಂದು, ಒಂದು ರೆಕಾರ್ಡ ರೈಟ್ಸನ ದೃಡೀಕೃತ ನಕಲನ್ನು ನಿಪಿ-12 ಎಂದು, ಒಂದು ಆಕಾರಬಂದ್ ನ ದೃಡೀಕೃತ ನಕಲನ್ನು ನಿಪಿ-13 ಎಂದು, 4 ಪಹಣಿ ಪತ್ರಿಕೆಗಳನ್ನು ನಿಪಿ-14 ರಿಂದ ನಿಪಿ-17 ಎಂದು ಗುರುತಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.</u>

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**